**Spl. C. 5243/2024**

ಪ್ರಾ.ಸಾ **:92** ಪ್ರಾ.ಸಾ **:14**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಕಾಂತರಾಜು ಕೆ.ಎನ್. |
| ತಂದೆ ಹೆಸರು | : | ನರಸಿಂಹಲು |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ನೌಕರರು |
| ವಿಳಾಸ | : | ತುಮಕುರ |

ಸಾಕ್ಷಿಗೆ ದಿನಾಂಕ **24-04-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಮುಖ್ಯವಿಚಾರಣೆ **:** ವಿಶೇಷ ಸರ್ಕಾರಿ ಅಭಿಯೋಜಕರಿಂದ **:**</u>

ಡಿಸೆಂಬರ್ 2015 ರಿಂದ ಮೇ 2019 ರ ವರೆಗೆ ಕರ್ನಾಟಕ ಲೋಕಯುಕ್ತ ಕಛೇರಿ ಬೆಂಗಳೂರಿನಲ್ಲಿ ಸಾಂಕಿಕ ಶಾಖೆಯಲ್ಲಿ ಉಪನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದೇನೆ

2. ಕರ್ನಾಟಕ ಲೋಕಯುಕ್ತ ಎ. ಡಿ.ಜಿ.ಪಿ.ಯವರು ದಿನಾಂಕ 14-10-2016 ರಂದು ನನಗೆ ಈ ಕೇಸಿನ ಆರೋಪಿಯ ಕುಟುಂಬ ನಿರ್ವಹಣೆಯ ಅಂದಾಜು ವೆಚ್ಚವನ್ನು ತಯಾರಿಸಿ ನೀಡುವಂತೆ ನಿರ್ದೇಶನ ನೀಡಿದ್ದರು.

3. ಕಾರಣ ನಾನು ಸಾಮಾನ್ಯ ಕುಟುಂಬ ಆದಾಯ ಮತ್ತು ವೆಚ್ಚ 2009 ಸಮೀಕ್ಷೆಯ ವರದಿ ಹಾಗೂ ಆಯಾ ವರ್ಷಗಳ ಬೆಲೆ ಸೂಚ್ಯಂಕಗಳನ್ನು ನೋಡಿಕೊಂಡು ದಿನಾಂಕ 12-12-1979 ರಿಂದ 28-12-2015 ರವರೆಗೆ ಅಂದಾಜು ವೆಚ್ಚವನ್ನು ತಯಾರಿಸಿದ್ದೇನೆ. ಅವರ ಕುಟುಂಬದಲ್ಲಿ ಆರೋಪಿ, ಆತನ ಹೆಂಡತಿ ಹಾಗೂ ಇಬ್ಬರು ಮಕ್ಕಳು ಇದ್ದರು ಎಂದು ಅಂದಾಜು ಪಟ್ಟಿಯನ್ನು ತಯಾರಿಸಿದ್ದೇನೆ.

4. ನಾನು ತಯಾರಿಸಿದ ಅಂದಾಜಿನ ಪ್ರಕಾರ ದಿನಾಂಕ 12-12-1979 ರಿಂದ 28-12-2015 ರ ಅವದಿಯಲ್ಲಿ ಆರೋಪಿಯ ಕುಟುಂಬದ ನಿರ್ವಹಣೆಯ ವೆಚ್ಚ 14,92,646/- ಆಗಿರುತ್ತದೆ. ಈ ಕುರಿತು ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ವರದಿಯನ್ನು ನಿ.ಪಿ.93 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.93(ಎ) ಎಂದುಗುರುತಿಸಲಾಯಿತು.

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

5.ನಾನು 2009 ರ ಸಮೀಕ್ಷೆಯ ವರದಿ ಹಾಗೂ ಆಯಾ ವರ್ಷಗಳ ಸೂಚ್ಯಂಕಗಳನ್ನು

**Spl. C. 5243/2024**
ಚಾ.ಸಾ **:92** ಪ್ರಾ.ಸಾ **:14**

ವರದಿಯೊಂದಿಗೆ ನೀಡಿರುವುದಿಲ್ಲ. ಆರೋಪಿ ಮತ್ತು ಅವರ ಕುಟುಂಬದವರು ಸಸ್ಯಹಾರಿಗಳು ಇದ್ದರೋ ಅಥವಾ ಮಾಂಸಹಾರಿಗಳು ಇದ್ದರೋ ಎಂಬ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ವರದಿಯಲ್ಲಿ ಆರೋಪಿ ಮತ್ತು ಅವರ ಕುಟುಂಬದವರು ಸಸ್ಯಹಾರಿ ಮತ್ತು ಮಾಂಸಹಾರಿಗಳು ಎಂದು ಪರಿಗಣಿಸಿದ್ದೇನೆ.

6. ನಿ.ಪಿ.93 ರಲ್ಲಿ ನಾನು ಕಾಣಿಸಿದಂತಹಕುಟುಂಬ ನಿರ್ವಹಣೆ ವೆಚ್ಚ ಅತಿ ಕಡಿಮೆ ಆಗಿದೆ ಅಂದರೆ ಸರಿಯಲ್ಲ. ನಾನು ಲೋಕಯುಕ್ತ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಎ.ಡಿ.ಜಿ.ಪಿ.ಯವರ ಸಲಹೆಯಂತೆ ನಾನು ಕಡಿಮೆ ವೆಚ್ಚವನ್ನು ತೋರಿಸಿದ್ದೇನೆ ಅಂದರೆ ಸರಿಯಲ್ಲ.

7. ನನ್ನ ವರದಿಯಲ್ಲಿ ಆರೋಪಿಯ ಮನೆಯಲ್ಲಿ ಕೆಲಸದಾಳುಗಳಿಗೆ ಆದ ವೆಚ್ಚವನ್ನು ತೋರಿಸಿರುವುದಿಲ್ಲ. ನಾನು ನಿ.ಪಿ.93 ರಲ್ಲಿ ಕಾಣಿಸಿದ 19 ಐಟಂಗಳಿಗೆ ಮಾತ್ರ ಅಂದಾಜು ವೆಚ್ಚವನ್ನು ಕಂಡುಕೊಂಡಿದ್ದೇನೆ. ನಾನು ನೀಡಿದ ಅಂದಾಜು ವೆಚ್ಚ ಸರಿಯಾಗಿ ಇರುವುದಿಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು.